ಎಂ.ವಿ.ಸಿ. ನಂಃ 148/**2025, P.W.-1**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ13.05.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

ನಾನು ಈ ವ್ಯವಹರಣೆಯಲ್ಲಿ ಅರ್ಜಿದಾರನಾಗಿದ್ದು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಾಕ್ಯವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ನಾನು ಪ್ರ.ವ.ವರದಿ, ದೂರಿನ ದೃಡೀಕೃತ ನಕಲುಗಳು, ಸ್ಥಳ ಮಹಜರು, ಕರಡು ನಕಾಶೆ, ಗಾಯದ ಪ್ರಮಾಣಪತ್ರ, ಕಲಂ 133 ಮೋಟಾರು ವಾಹನ ಖಾಯಿದೆಯಡಿ ನೀಡಿದ ನೋಟೀಸ್, 1ನೇ ಎದುರುದಾರರು ನೊಟೀಸಿಗೆ ನೀಡಿರುವ ಉತ್ತರ, ಸಿಸಿ 38-25 ವ್ಯವಹರಣೆಯ ಆದೇಶ ಪುಟ, ಐ ಎಮ್ ವಿ ವರದಿ, ಚಾರ್ಜ್ ಶೀಟ್‌ನ ದೃಡೀಕೃತ ನಕಲುಗಳು, ಅಂಗನ್ಯೂನತಾ ಪ್ರಮಾಣ ಪತ್ರ, ಡಾ. ಎಸ್ ಶಿಬ್ಲಿರವರು ನೀಡಿದ ಪತ್ರ, ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 14 ಎಂದು ಗುರುತಿಸಲಾಯಿತು.

(ನಿಪಿ-12 ದಾಖಲೆಯನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನಿಸಲಾಗಿದೆ.)

(ಈ ಹಂತದಲ್ಲಿ ಮಾನ್ಯ ಅರ್ಜಿದಾರರ ಪರ ವಕೀಲರು ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡುಬಾರದ ಕಾರಣ

ಅವರ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು ಮತ್ತು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು )

ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು ಃ 2ನೇ ಎದುರುದಾರರ ಪರಃ

2ನೇ ಎದುರುದಾರರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು